International Journal of Kannada Research 2023; 9(3): 08-11



International Journal of Kannada Research
www.kannadajournal.com

**ISSN: 2454–5813**
IJKR 2023; 9(3): 08-11
© 2023 IJKR
www.kannadajournal.com
Received: 13-05-2023
Accepted: 16-06-2023

**ಡಾ. ಶಬೀನಾ**
ಕನ್ನಡ ಸಹ ಪ್ರಧ್ಯಾಪಕರು
ಪ್ರಸಿಡೆನ್ಸಿ ವಿಶ್ವವಿದ್ಯಾಲಯ
ರಾಜಾನುಕುಂಟೆ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ. ಶಬೀನಾ**
ಕನ್ನಡ ಸಹ ಪ್ರಧ್ಯಾಪಕರು
ಪ್ರಸಿಡೆನ್ಸಿ ವಿಶ್ವವಿದ್ಯಾಲಯ
ರಾಜಾನುಕುಂಟೆ, ಬೆಂಗಳೂರು, ಕರ್ನಾಟಕ, ಭಾರತ

# ವಚನಗಳಲ್ಲಿ 'ಓದು' ಪದ

**ಡಾ. ಶಬೀನಾ**

**ಪೀಠಿಕೆ**

ಮಾನವ ಸಂಘ ಜೀವಿ. ಸಮಾಜ ಜೀವಿ. ತನ್ನ ಸಹಜ ಆಕಾಂಕ್ಷೆಗಳಲ್ಲೊಂದಾದ ಅನುಭವವನ್ನು ಇತರರೊಡನೆ ಹಂಚಿಕೊಳ್ಳುವ ಆಶಯದಿಂದ ಬಹಳಷ್ಟು ಮಾಧ್ಯಮಗಳನ್ನು ಕಂಡು ಕೊಂಡನು. ಕಾಲಕ್ಕೆ ಸ್ಥಳಕ್ಕೆ ತಕ್ಕಂತೆ ತನ್ನ ಆಲೋಚನೆ, ಅನುಭವ ಆಶಯಗಳನ್ನು ವ್ಯಕ್ತಪಡಿಸುವ ಮಾಧ್ಯಮಗಳನ್ನು ಬದಲಾಯಿಸಿಕೊಳ್ಳುತ್ತಾ ಹೊಚ್ಚ ಹೊಸತನವನ್ನು ಜೊತೆಗೂಡಿಸುತ್ತಾ ಮುಂದುವರಿದನು. ಅಂತಹ ಮಾಧ್ಯಮಗಳಲ್ಲಿ ಸಾಹಿತ್ಯವು ಒಂದಾಗಿದೆ. ತನ್ನ ಅನುಭವವು ಬಹುಕಾಲ ಉಳಿಯಲಿ ಎಂಬ ಆಂಕಾಂಕ್ಷೆಯಿಂದಾಗಿ ಆ ಅನುಭವಕ್ಕೆ ಒಂದು ಕೃತಿಯ ರೂಪ ಕೊಡಲು ಹೊರಟು ಕವಿ, ಸಾಹಿತಿಯಾದ. ಪ್ರತಿಯೊಂದು ಕಾಲದಲ್ಲೂ ಸಾಹಿತ್ಯ ಸಷ್ಟಿಯಲ್ಲಿನ ಪ್ರಕಾರಗಳನ್ನು ಪರಿಚಯಿಸುತ್ತಾ, ಹೋರಾಟ ಸಂಘರ್ಷಗಳು, ಬದಲಾದ ಬದುಕಿನ ನೆಲೆಗಳು ಮೊದಲಾದವುಗಳನ್ನು ಸಾಹಿತ್ಯದಲ್ಲಿ ಬೆರೆಯುವಂತೆ ಮಾಡಿದ. ಇಂತಹ ಸ್ಥಿತಿಯಲ್ಲಿ ಜನ್ಮ ಪಡೆದ ಸಾಹಿತ್ಯ ಪ್ರಕಾರಗಳಲ್ಲಿ 'ವಚನ' ಸಾಹಿತ್ಯವು ಒಂದಾಗಿದ್ದು, ಲೋಕದ ಡೊಂಕನ್ನು ತಿದ್ದಲು, ಭಾರತೀಯ ಸಂಸ್ಕತಿಯ ಮೌಲ್ಯವನ್ನು ಎತ್ತಿ ಹಿಡಿಯಲು, ಜನ ಸಾಮಾನ್ಯರ ಜೀವನ ಮೌಲ್ಯ ಸಮಾನತೆಯ ಅರಿವು ಮೂಡಿಸಲು ಪ್ರಾರಂಭವಾದ ಸಾಮಾಜಿಕ ಕ್ರಾಂತಿಯ ಫಲವಾಗಿ ದೊರೆತ ಕೊಡುಗೆಯೇ 'ವಚನಗಳು'. ದೇವರ ದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಅಂಬಿಗರ ಚೌಡಯ್ಯ, ನಿಜಗುಣ ಶಿವಯೋಗಿ, ಚೆನ್ನ ಬಸವಣ್ಣ, ಅಕ್ಕ ಮಹಾದೇವಿ, ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯ, ಮಡಿವಾಳ ಮಾಚಯ್ಯ ಮೊದಲಾದ ೧೨೫ ಕ್ಕೂ ಹೆಚ್ಚು ಜನ ಶರಣರು ಸುಮಾರು ೪೫-೫೦ಕ್ಕೂ ಹೆಚ್ಚು ವಿಧದ ಕಸುಬುಗಳಲ್ಲಿ ತೊಡಗಿದ್ದು, ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ 'ವಚನಗಳ' ರಚನೆಯನ್ನು ಮಾಡಿದರು. ವಚನಕಾರರು ತಮ್ಮ ಅನುಭವವನ್ನು ತಮ್ಮ ರಚನೆಯ ಮೂಲಕ ಹೇಳಿಕೊಳ್ಳುತ್ತಿದ್ದುದರಿಂದ 'ವಚನ' ಒಂದು ಚಳುವಳಿಯೂ ಆಯಿತು. ವಚನಕಾರರು ತಮ್ಮ ರಚನೆಯಲ್ಲಿ ಹೇಳಿಕೊಳ್ಳದೆ ಇರುವ ವಿಚಾರವೇ ಇಲ್ಲ. ಅದು ಸಾಮಾನ್ಯದಿಂದ ಹಿಡಿದು ಎಲ್ಲಾ ವಿಚಾರಗಳನ್ನು ಒಳಗೊಂಡಿರುತ್ತದೆ. ಎಲ್ಲಾ ವಿಚಾರಗಳ 'ಸರ್ವವ್ಯಾಪಿತ್ವವನ್ನು' ವಚನಗಳಲ್ಲಿ ಕಾಣಬಹುದು. ಅಂತಹ ಒಂದು ವಿಚಾರ ' **ಓದು'** .ವಚನಕಾರರು ತಮ್ಮ ವಚನಗಳಲ್ಲಿ **'ಓದು'** ಪದವನ್ನು ಬಳಸಿರುವ ಪರಿಯು ವಿಶಿಷ್ಟವಾಗಿದೆ.

**ಆಶಯದ ವಿಶ್ಲೇಷಣೆ:** ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಸಿರಿಸಂಪತ್ತು. ಅದನ್ನು ಅರಿತು ಅನುಭವಿಸಿದವರಿಗೆ ಮಾತ್ರ ಅದರ ಮೌಲ್ಯವನ್ನು ಸವಿಯಲು ಸಾಧ್ಯ ಎಂಬುದು ಜ್ಞಾನಿಗಳ ನುಡಿ. ವಚನ ಸಾಹಿತ್ಯದ ಬಾಹ್ಯ ಮತ್ತು ಆಂತರಿಕ ಅನುಭವ ಮತ್ತು ಅನುಭಾವಿಕ ಜ್ಞಾನ ಸಂಪತ್ತು ಅಪಾರ.

ಆಧಾರವಿಲ್ಲದ ಗೊಡ್ಡು ಸಂಪ್ರದಾಯವನ್ನು ಪ್ರಶ್ನಿಸುತ್ತಾ, ಅನುಭವ, ಜ್ಞಾನದ ಬೆಳಕು ಚೆಲ್ಲುತ್ತಾ ಪ್ರಥಮಾಧ್ಯತೆಯನ್ನು ಮಾನವೀಯ ಮೌಲ್ಯಕ್ಕೆ ನೀಡುತ್ತಾ ಸಹೃದಯ ಓದುಗರ ಅಂತರಂಗದ ಜ್ಞಾನ ಜ್ಯೋತಿಯಾಗಿದೆ. ಗದ್ಯವೂ ಅಲ್ಲದ ಪದ್ಯವೂ ಅಲ್ಲದ ನುಡಿರತ್ನಗಳಂತಿರುವ ವಚನಗಳು ವಚನ ಸಾಹಿತ್ಯದ ಮೂಲವಾಗಿದೆ. ಯಾವುದೇ ಛಂದಸ್ಸಿನ ನಿಯಮ ಬಂಧಕ್ಕೆ ಒಳಪಡದೆ, ಶಿಷ್ಟ ಭಾಷೆಯ ಬಿಗುಮಾನವಿಲ್ಲದೆ, ಮೈಲಿಗೆ ಮಡಿಗಳ ಭಾವವಿಲ್ಲದೆ ಮನಸ್ಸುಗಳು ಮಿಡಿಯುವಂತೆ ಮಾಡುವ ಯಾವುದೇ ಬೆಲೆಗೆ ನಿಲುಕದ ವಜ್ರಕ್ಕಿಂತಲೂ ಅಧಿಕ ಬೆಲೆಯುಳ್ಳ ನುಡಿಮುತ್ತುಗಳೇ ' ವಚನಗಳು'. ಈ ವಚನಗಳ ರಚನಾಕಾರರು ಒಂದೇ ಕುಲ, ಜಾತಿ, ಪಂಗಡದವರಲ್ಲ. ಸಮಷ್ಟಿಯನ್ನು ನಂಬಿ ಜೀವಕಳೆಯನ್ನು ತುಂಬಿ, ಸಮನ್ವಯತೆಯ ತತ್ವವನ್ನು ಬಿತ್ತಿ, ಸಕಲ ಜೀವಾತ್ಮರಿಗೆ ಲೇಸನ್ನು ಬಯಸಿ ಮಾನವತೆಯನ್ನು ಹುಟ್ಟು ಹಾಕಿದ ಹರಿಕಾರರೇ ಈ ವಚನಕಾರರು.

೧೨ನೇ ಶತಮಾನದಲ್ಲಿ ಜಾತಿಯತೆ, ಅಸಮಾನತೆ, ಅಜ್ಞಾನ ತುಂಬಿ ತುಳುಕಾಡುತ್ತಿತ್ತು. ವರ್ಣಾಶ್ರಮಧರ್ಮ ಎಲ್ಲೆಲ್ಲೂ ಆಚರಣೆಯಲ್ಲಿತ್ತು. ಪುರೋಹಿತಶಾಹಿ ವರ್ಗವು ಪ್ರಬಲವಾಗಿ ದೀನದಲಿತರು ಅಬಲರು ಶೋಷಣೆಗೆ ಒಳಗಾಗಿ ಅನ್ಯಾಯ, ಅತೃಪ್ತಿ, ಅಂಧ ಆಚರಣೆಗಳು ಹೆಚ್ಚಾಗಿ ಜನ ಸಾಮಾನ್ಯರು ನೊಂದು ಹೋಗಿದ್ದರು. ಇಂತಹ ಸಂದರ್ಭದಲ್ಲಿ ಸ್ಥಿತಿಯ ವಿರುದ್ಧ ಕ್ರಾಂತಿಕಾರಿ ಮನೋಭಾವವನ್ನು ಪ್ರಕಟಿಸುತ್ತಾ ವಚನಗಳು ಮೂಡಿ ಬಂದವು. ವಚನಗಳು ಸ್ವಾನುಭವ ಲೋಕಾನುಭವಗಳ ಸಂಗಮವಾಗಿದ್ದು, ಅನುಭವದ ಪ್ರಾಮಾಣಿಕತೆ ಆಡುಮಾತಿನ ಸೊಂಪು, ಅಭಿವ್ಯಕ್ತಿಯ ತೀವ್ರ ಪರಿಣಾಮ ಮಾದಲಾದ ಗುಣಲಕ್ಷಣಗಳಿಂದ ಕೂಡಿದುದಾಗಿದೆ. ಹೀಗಾಗಿಯೇ ಇದು ಕನ್ನಡ ಸಾಹಿತ್ಯದ ವಿಷಯ ವಾಙ್ಮಯಕ್ಕೆ ನೀಡಿದ ವಿಶೇಷ ಕೊಡುಗೆ ಎಂಬ ಹೆಗ್ಗಳಿಕೆಗೆ ಕಾರಣವಾಗಿದೆ. ವಚನಗಳು ಚರಿತ್ರೆ, ತತ್ವ ಸಾಹಿತ್ಯ ದಷ್ಟಿಯಿಂದಾಗಿ ಅಮೂಲ್ಯವೆನಿಸಿದೆ. ಇಹಲೋಕ ಪರಲೋಕ ವಿಚಾರ, ಕಾಯಕ ತತ್ವ, ಕೃಷಿ ವಿಜ್ಞಾನ, ಜಾತಿ ಭೇದ ವಿರೋಧಿ, ಸ್ತ್ರೀಪುರುಷ ಸಮಾನತೆ, ಓದು, ಅಗ್ನಿ, ಆತ್ಮ, ಆಚಾರ, ಗುರು ಇನ್ನೂ ಬಹಳಷ್ಟು ವಿಚಾರಗಳನ್ನು ವಚನಗಳಲ್ಲಿ ಕಾಣಬಹುದು. ಈ ಎಲ್ಲಾ ವಿಚಾರಗಳಲ್ಲಿ ಮಾನವ ಸಂಸ್ಕೃತಿ ಮತ್ತು ನಾಗರಿಕತೆಗಳ ಮೂಲ ನೆಲೆ ಅಡಗಿದ್ದು, ಪ್ರತಿಯೊಂದು ವಿಚಾರವು ಜ್ಞಾನದ ಆಗರವಾಗಿರುವುದನ್ನು ಗಮನಿಸಬಹುದು. ವಚನಗಳಲ್ಲಿ ಬಳಸಿರುವ ಪ್ರತಿ ಪದಗಳಲ್ಲಿ ವಿಶೇಷವಾದ ಅರ್ಥವಿದ್ದು, ಸರಳ ಸುಲಭವಾಗಿ ವಚನಕಾರರು ಎಲ್ಲರಿಗೂ ಅರ್ಥವಾಗುವಂತೆ ಬಳಸಿದ್ದಾರೆ.

ವಚನಕಾರರು ತಮ್ಮ ವಚನಗಳಲ್ಲಿ ಬಳಸಿರುವ ಪದಗಳಲ್ಲಿ " ಓದು " ಪದವನ್ನು ಬಳಸಿರುವ ಆಯ್ದ ಕೆಲವು ವಚನಗಳನ್ನು ಉದಾಹರಣೆಯಾಗಿ ಲೇಖನದ ವಿವರಣೆಯಲ್ಲಿ ಬಳಸಿಕೊಳ್ಳಲಾಗಿದೆ.

1. ಹಗಲೋದಿ ಬ್ರಹ್ಮಂಗೆ ಹೇಳಿದೆ,
   ಇರುಳೋದಿ ವಿಷ್ಣುವಿಂಗೆ ಹೇಳಿದೆ,
   ಉಭಯವಿಲ್ಲದ ವೇಳೆಯಲ್ಲಿ ಓದಿ ರುದ್ರಂಗೆ ಹೇಳಿದೆ,
   ಎನ್ನ ಓದು ಕೇಳಿ ನಿದ್ರೆಯ ಕಳೆದು
   ಜಾಗ್ರದಲ್ಲಿ ಕುಳಿತಿರ್ಪರು ನೋಡೆಂದನಯ್ಯಾ
   ಕಾಡನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ
   ನಿರ್ಮಾಯಪ್ರಭುವೆ – ಕಾಡ ಸಿದ್ಧೇಶ್ವರ (ಸಮಗ್ರ ವಚನ ಸಂಪುಟ: ೧೦, ವಚನದ ಸಂಖ್ಯೆ : ೪೮೬)
2. ಓದಿದ ವೇದದಲ್ಲಿ ಏನಹುದಯ್ಯಾ ? ಓದಿಸಬಾರದಂಥ ಲಿಂಗಸ್ಥಲ.
   ಸಾಧಿಸಿದ ಶಾಸ್ತ್ರದಲೇನಹುದಯ್ಯಾ ? ಸಾಧ್ಯವಾಗದಂಥ ಜಂಗಮಸ್ಥಲ.
   ತರ್ಕಿಸಿದ ತರ್ಕದಲ್ಲಿ ಏನಹುದಯ್ಯಾ ?
   ತರ್ಕಕ್ಕಗೋಚರವಹಂಥ
   ಪ್ರಸಾದಿಸ್ಥಲ.
   ಓದು ವೇದಶಾಸ್ತ್ರ ತರ್ಕಕ್ಕಗೋಚರ
   ಕೂಡಲಚೆನ್ನಸಂಗಾ ನಿಮ್ಮ ಶರಣ –
   ಚೆನ್ನಬಸವಣ್ಣ(ಸಮಗ್ರ ವಚನ ಸಂಪುಟ: ೦೩, ವಚನದ ಸಂಖ್ಯೆ : ೮೩೫)
3. ವೇದ ನಾಲ್ಕನು ಓದಿದಡೇನು ? ಶಾಸ್ತ್ರವ ನೆರೆ ಕೇಳಿದಡೇನು ?
   ಶಿವಜ್ಞಾನಹೀನರು ಬಲ್ಲರೆ ಭಕ್ತಿಯ ಪಥವನು ?
   ಅಲೋಡ್ಯಂ ಚ ಚತುರ್ವೇದೀ ಸರ್ವಶಾಸ್ತ್ರವಿಶಾರದಃ |
   ಶಿವತತ್ವಂ ನ ಜಾನಾತಿ ದರ್ವೀ ಪಾಕರಸಂ ಯಥಾ ||
   ಕ್ಷೀರದೊಳಗಣ ಸಟ್ಟುಗ ಸವಿಸ್ವಾದುಗಳ ಬಲ್ಲುದೆ ?
   ಓದಿದ ನಿರ್ಣಯವ ನಮ್ಮ ಮಾದಾರ ಚೆನ್ನಯ್ಯ,
   ಮಡಿವಾಳಯ್ಯ, ಡೋಹರ ಕಕ್ಕಯ್ಯನವರು ಬಲ್ಲರು,
   ಬಸವಪ್ರಿಯ ಕೂಡಲಚೆನ್ನಸಂಗಮದೇವಾ. –
   ಸಂಗಮೇಶ್ವರದ ಅಪ್ಪಣ್ಣ (ಸಮಗ್ರ ವಚನ ಸಂಪುಟ:೯, ವಚನದ ಸಂಖ್ಯೆ:೩೪೫)
4. ಲೋಕದ ಡೊಂಕ ನೀವು ತಿದ್ದುವಿರಯ್ಯ
   ನಿಮ್ಮ (ತನುಮನದ) ಡೊಂಕ ತಿದ್ದಿ ತೀಡಿಕೊಳಲರಿಯದೆ.
   ಪುರಾತನರು, ನುಡಿದಂತೆ ನಡೆಯದವರೆಲ್ಲ,
   ಕಡು ಓದಿದ ಗಿಳಿ ತನ್ನ ಮಲವ ತಾ ತಿಂದಂತೆ.
   ನೆರೆಮನೆಯವರ ದುಃಖವ ಕೇಳಿ,
   ಗಡ್ಡ ಮೀಸೆ ಮುಂಡೆಯ ಬೋಳಿಸಿಕೊಂಡು
   (ಕಡೆಯಲ್ಲಿ) ಹೋಗಿ ಅಳುತಿಪ್ಪವರ ಕಂಡರೆ

ಕೂಡಲಚೆನ್ನಸಂಗನ ಶರಣರು ನಗುತಿಪ್ಪರಯ್ಯಾ. - ಚನ್ನಬಸವಣ್ಣ (ಸಮಗ್ರ ವಚನ ಸಂಪುಟ:೩, ವಚನದ ಸಂಖ್ಯೆ: ೧೫೪೮)

5. ಆದಿ ಅನಾದಿ ಹದಿನಾಲ್ಕುಲೋಕ ಕಾಲ ಕಲ್ಪಿತ ಮಂತ್ರ ತಂತ್ರ
ಓದು, ನೇಮ, ಸಂಧ್ಯಾ ಸಮಾಧಿ ಮೌಂಜಿ ಕರ್ಮ
ನೀರು ನೇಣು ಯಜ್ಞೋಪವೀತ ಹುಟ್ಟದಂದು
ಒಬ್ಬ ಶರಣ ಭಕ್ತಿಯ ಮಾಡುತ್ತಿಪ್ಪುದ ಕಂಡೆನಯ್ಯಾ.
ಆ ಶರಣನ ಭಕ್ತಿಯೆಂಬ ಚಿತ್ಪಿಂಡದೊಳಗೆ
ಎರಡುಸಾವಿರದೆಂಟುನೂರು ಕೋಟಿ
ಯೋಜನದುದ್ದದೊಂದು
ಮಹಾಲೋಕದಿಂದತ್ತಲರಿಯದಿಪ್ಪ
ಷಡುಸಾದಾಖ್ಯನಾಯಕರ ಹೆಂಡಿರೆಲ್ಲಾ
ಮೊಲೆದೆಗೆದು (ಓಲೆದೆಗೆದು?) ಹೋಯಿತ್ತ ಕಂಡೆ
ಗುಹೇಶ್ವರಾ.- ಅಲ್ಲಮಪ್ರಭುದೇವರು (ಸಮಗ್ರ ವಚನ ಸಂಪುಟ: ೨, ವಚನದ ಸಂಖ್ಯೆ:೮೮೧)

6. ಕಂಡೆ ಕಾಣೆನೆಂಬುದು ಕಂಗಳ ಭ್ರಮೆ,
ಕೂಡಿದೆನಗಲಿದೆನೆಂಬುದು ಕಾಯ ಭ್ರಮೆ,
ಅರಿದೆ ಮರೆದೆನೆಂಬುದು ಚಿದೋಹಂ ಭ್ರಮೆ,
ಓದು ವೇದಂಗಳ ಜಿನುಗು ಉದುಮನದ ಭ್ರಮೆ,
ಇಹ ಪರಂಗಳನಾಸೆಗೆಯ್ವುದು ಜೀವ ಭ್ರಮೆ,
ಸೌರಾಷ್ಟ್ರ ಸೋಮೇಶ್ವರನೆಂಬುದು ಸಕಲಭ್ರಮೆ. – ಆದಯ್ಯ (ಸಮಗ್ರ ವಚನ ಸಂಪುಟ :೬, ವಚನದ ಸಂಖ್ಯೆ:೮೫೭)

7. ಓದಿದ ವೇದದಲ್ಲಿ ಏನಹುದಯ್ಯಾ ? ಓದಿಸಬಾರದಂಥ ಲಿಂಗಸ್ಥಲ.
ಸಾಧಿಸಿದ ಶಾಸ್ತ್ರದಲೇನಹುದಯ್ಯಾ ? ಸಾಧ್ಯವಾಗದಂಥ ಜಂಗಮಸ್ಥಲ.
ತರ್ಕಿಸಿದ ತರ್ಕದಲ್ಲಿ ಏನಹುದಯ್ಯಾ ?
ತರ್ಕಕ್ಕಗೋಚರವಹಂಥ
ಪ್ರಸಾದಿಸ್ಥಲ.ಓದು ವೇದಶಾಸ್ತ್ರ ತರ್ಕಕ್ಕಗೋಚರ
ಕೂಡಲಚೆನ್ನಸಂಗಾ ನಿಮ್ಮ ಶರಣ. – ಚನ್ನಬಸವಣ್ಣ (ಸಮಗ್ರ ವಚನ ಸಂಪುಟ : ೩, ವಚನದ ಸಂಖ್ಯೆ :೮೩೫)

ಮೇಲೆ ಉಲ್ಲೇಖಿಸಿರುವ ವಚನಗಳಲ್ಲಿ ಕಾಡ ಸಿದ್ಧೇಶ್ವರ , ಚೆನ್ನಬಸವಣ್ಣ, ಆದಯ್ಯ, ಅಲ್ಲಮಪ್ರಭು, ಸಂಗಮೇಶ್ವರದ ಅಪ್ಪಣ್ಣ ಮೊದಲಾದ ವಚನಕಾರರು ' ಓದು' ಪದವನ್ನು ವಿಶೇಷವಾದ ಅರ್ಥದಲ್ಲಿ ಬಳಸಿದ್ದು, ಸಮಾಜಕ್ಕೆ ಒಂದು ಸಂದೇಶವನ್ನು ನೀಡುವಂತಿದೆ. ಓದು ಎಂಬುದು ಗರ್ವದಿಂದ ಸಾಧ್ಯವಿಲ್ಲ. ತನಗೆಲ್ಲ ಗೊತ್ತು ಎನ್ನುವುದು ಓದು ಆಗುವುದಿಲ್ಲ. ಆಚಾರ ವಿಚಾರ, ನಡೆ ನುಡಿಯಲ್ಲಿ ಸಭ್ಯತೆ ಶಿಸ್ತು, ಸಂಸ್ಕಾರ ಇಲ್ಲದಿದ್ದರೆ ಹಾಗೂ ಅಂತರಂಗ ಬಹಿರಂಗ, ಆತ್ಮ ಪರಮಾತ್ಮನ ತಿಳಿವು ಇಲ್ಲದಿದ್ದರೆ ಅಂತಹ ಓದು ವ್ಯರ್ಥ ಹಾಗೂ ಮಕ್ಕಿ ಕಾಮಕ್ಕಿ ಎಂಬಂತ ಗಿಳಿ ಪಾಠದ ಓದು ಯಾವುದೇ ಜ್ಞಾನವನ್ನು ನೀಡುವುದಿಲ್ಲ ಎಂಬ ಒಳಾರ್ಥದಿಂದ ಕೂಡಿದೆ. ಜೊತೆಗೆ ಇಂದಿನ ಪ್ರಸ್ತುತದಲ್ಲಿ ಓದು ಪದದ ಅರ್ಥವನ್ನು ಈ ವಚನಗಳೊಂದಿಗೆ ಹೋಲಿಸಿದರೆ ಬಹಳ ವ್ಯತ್ಯಾಸವಿರುವುದನ್ನು ಗಮನಿಸಿಬಹುದು. ಇಂದಿನ ಆಧುನಿಕ ಕಾಲದಲ್ಲಿ ಬೆಳವಣಿಗೆ ಅಭಿವೃದ್ಧಿಯ ಹೆಸರಲ್ಲಿ ಓದಿನ ಅರ್ಥವೇ ಹಾಳಾಗಿದೆ. ಓದು ಎಂದರೆ ಕೇವಲ ಔದ್ಯೋಗಿಕ ಅವಕಾಶಕ್ಕಾಗಿ ಮಾತ್ರ ಎಂಬಂತಾಗಿದ್ದು, ಕಾಲ ಸ್ಥಳ ಹಾಗೂ ಅಗತ್ಯಕ್ಕೆ ತಕ್ಕಂತೆ ವಿನ್ಯಾಸಯುಕ್ತವಾಗುತ್ತಿರುವುದು. ಯಾವುದೇ ಮೌಲ್ಯವಾಗಲಿ, ವ್ಯಕ್ತಿತ್ವ ಬೆಳವಣಿಗೆಯಾಗಲಿ ಕೇವಲ ನಾಮಕಾವಸ್ಥೆಯ ಶಿರ್ಷಿಕೆಯಾಗಿ ಉಳಿದಿರುವ ಸ್ಥಿತಿಗೆ ಬಂದಿರುವುದನ್ನು ಮೇಲೆ ತಿಳಿಸಿರುವ ವಚನಗಳ ಮೂಲಕ ಇಂದಿನ ಸ್ಥಿತಿಗೆ ಹೋಲಿಸಿ ನೋಡಬಹುದು.

ಒಟ್ಟಾರೆಯಾಗಿ ಗಮನಸಿದರೆ ೧೨ನೇ ಶತಮಾನದಲ್ಲಿಯೇ ಸ್ವಾನುಭವದ ನೆಲೆಗಟ್ಟಿನಲ್ಲಿ ಮೈಗೂಡಿಸಿಕೊಂಡ ಸರಳ ವಚನಗಳು ಅಗತ್ಯ ವಿಚಾರದ ವಾಹಕವಾಗಿ ಓದುಗ ಮತ್ತು ಕೇಳುಗರ ಮನದಲ್ಲಿ ನೆಲೆ ನಿಂತು ಅರಿವಿನ ಆಗರವಾಗಿರುವುದು ಸಾಧ್ಯವೆಂಬುದನ್ನು ವಚನಕಾರರು ತೋರಿಸಿಕೊಟ್ಟಿದ್ದಾರೆ. ವಚನಗಳು ಕಾಲ ಸ್ಥಳ ವೈಯಕ್ತಿಕವಾಗಿ ಭಿನ್ನಾಬಿಪ್ರಾಯಕ್ಕೆ ಒಳಗಾಗುವಂತದಾಗಿದ್ದು, ಅನುಭಾವ ಅನುಭವಿಕ ತತ್ವಗಳನ್ನು ತಿಳಿಸುವ ಮೂಲಕ ಮಾನವನ ಬದುಕಿನ ಸ್ತರಗಳನ್ನು ಕಾಣುವಂತೆ ವಚನಗಳು ಮೂಡುತ್ತವೆ. ಅಲ್ಲದೆ ಬದಲಾವಣೆಗೆ ತಕ್ಕಂತೆ ನಿತ್ಯನೂತನವಾಗಿ ನಿರಂತರವಾಗಿ ಪ್ರತಿಕ್ಷಣವೂ ಹೊಸದಾದುದನ್ನು ಬದುಕಿಗೆ ನೀಡುತ್ತಾ ಬದುಕಲ್ಲಿ ನೂತನ ಅನುಭವ ನೀಡುತ್ತಾ ಬದುಕನ್ನು ಉದ್ಧರಿಸುವ ಕಾರ್ಯ ಮಾಡುವಲ್ಲಿ ವಚನಗಳ ಕಾರ್ಯ ಮಹತ್ವದ್ದಾಗಿದೆ. ಕಾಲ ಬದಲಾಗಬಹುದು ವಚನಗಳಲ್ಲಿ ಉಲ್ಲೇಖಿಸಿರುವ ವಿಚಾರಗಳು ಬದಲಾಗಲಾರದು. ಎಲ್ಲಾ ಕಾಲ ಸ್ಥಳ ಸನ್ನಿವೇಶಕ್ಕೆ ಅನ್ವಯವಾಗುತ್ತದೆ ಎಂಬುದು ನನ್ನ ಅಭಿಮತ.

## ಪರಾಮರ್ಶನ ಗ್ರಂಥಗಳು

1. ಸಮಗ್ರ ವಚನ ಸಂಪುಟ: ೨,೩,೬,೯,೧೦, ವಚನದ ಸಂಖ್ಯೆ : ೪೮೬,೮೩೫,೩೪೫, ೧೫೪೮, ೮೮೧, ೮೫೭
2. ಅಂತರ್ಜಾಲ ಮಾಹಿತಿ : https://kn.wikipedia.org › wiki › ವಚನ_ಸಾಹಿತ್ಯ
3. https://vachana.sanchaya.net/

4. ವಚನ ಸಾಹಿತ್ಯ: ಚಿದಾನಂದಮೂರ್ತಿ.ಎಮ್. ಪ್ರಕಾಶಕರು: ಸಪ್ನಾ ಬುಕ್ ಹೌಸ್, ಬೆಂಗಳೂರು . ೨ ೦ ೧ ೩ . ಪು. ಸಂ - ೨ -೧ ೨
5. ವಚನ ಸಂಸ್ಕೃತಿ - ಸಾಹಿತ್ಯ ಸಂಗತಿ : ಎಸ್.ಜಿ. ಸಿದ್ಧರಾಮಯ್ಯ.ಪ್ರಕಾಶಕರು: ಸಪ್ನಾ ಬುಕ್ ಹೌಸ್, ಬೆಂಗಳೂರು . ೨ ೦ ೧ ೩ .ಪೀಠಿಕಾ ಭಾಗ.